# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ-೫೮೩ ೨೭೬

### ಮಾರ್ಚ್ ೮, ೨೦೧೬ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೮೨ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೩. ಡಾ. ಹನುಮಣ್ಣ ನಾಯಕ ದೊರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೪. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೫. ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೦೬. ಡಾ. ಡಿ. ಪಾಂಡುರಂಗ ಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಸಮಾಜ ವಿಜ್ಞಾನಗಳ ನಿಕಾಯದ ಡೀನ್ ಆಗಿ ಡಾ. ಕೆ. ಎಂ. ಮೇತ್ರಿ ಅವರು ಕಾರ್ಯನಿರ್ವಹಿಸಿದ ಸೇವೆಯನ್ನು ಸ್ಮರಿಸುತ್ತ ಬೀಳ್ಕೊಡಲಾಯಿತು. ಸದರಿ ನಿಕಾಯಕ್ಕೆ ಹೊಸದಾಗಿ ಡೀನ್ ಆಗಿ ನೇಮಕಗೊಂಡ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ಸ್ವಾಗತವನ್ನು ಕೋರಲಾಯಿತು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ದಿನಾಂಕ: ೧೧-೧-೨೦೧೬ ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೧ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳನ್ನು ಪರಿಶೀಲಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**ದಿನಾಂಕ: ೧೧-೧-೨೦೧೬ ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೧ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.

**೧೮೨.೦೧. ನುಡಿಹಬ್ಬ-೨೪ ಘಟಿಕೋತ್ಸವ ಕುರಿತು.**

**ನಿರ್ಣಯ:** ದಿನಾಂಕ: ೧೦-೩-೨೦೧೬ ರಂದು ೨೪ನೇ ನುಡಿಹಬ್ಬ ಘಟಿಕೋತ್ಸವವನ್ನು ನಡೆಸಲು ಘನತೆವೆತ್ತ ಕುಲಾಧಿಪತಿಗಳು ಅನುಮೋದನೆ ನೀಡಿರುವುದನ್ನು ಸಭೆಯ ಗಮನಕ್ಕೆತರಲಾಯಿತು. ಸದರಿ ದಿನದಂದು ನುಡಿಹಬ್ಬವನ್ನು ಆಚರಿಸಲು ಒಪ್ಪಿಗೆ ನೀಡಲಾಯಿತು.

**೧೮೨.೦೨. ವಿವಿಧ ಕೋರ್ಸ್‌ಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಪ್ರಮಾಣಪತ್ರಗಳಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ದಿನಾಂಕ: ೧೦-೩-೨೦೧೬ ರಂದು ನಡೆಯಲಿರುವ ೨೪ನೇ ನುಡಿಹಬ್ಬ ಘಟಿಕೋತ್ಸವದಲ್ಲಿ ಪದವಿ ಪಡೆಯುವ ವಿವಿಧ ಕೋರ್ಸ್‌ಗಳ ಅಭ್ಯರ್ಥಿಗಳ ಅಂಕಿಅಂಶಗಳ ತಃಖ್ತೆಗೆ ಅನುಮೋದನೆ ನೀಡಲಾಯಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**೧೮೨.೦೩. ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಸೋಲಾರ್ ಪವರ್ ಪ್ಲಾಂಟ್ ಅಳವಡಿಸುವ ಕುರಿತು.**

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಸೋಲಾರ್ ಪವರ್ ಪ್ಲಾಂಟ್ ಸ್ಥಾಪಿಸಲು ಬೇಕಾದ ಸಂಪನ್ಮೂಲಗಳ ಬಗ್ಗೆ ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆತಂದರು. ೧೨ನೆಯ ಯೋಜನೆಯ ಯುಜಿಸಿ ಅನುದಾನ/ಇಂಧನ ಇಲಾಖೆ/ಸಮಾಜ ಕಲ್ಯಾಣ ಇಲಾಖೆ/ರೂಸಾ ಅನುದಾನ ಇವುಗಳಲ್ಲಿ ಯಾವುದು ಲಭ್ಯವಾಗುತ್ತದೆಯೋ ಆ ಅನುದಾನದಲ್ಲಿ ಸದರಿ ಯೋಜನೆಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಯಿತು. ಸದರಿ ಯೋಜನೆಯನ್ನು ಸರ್ಕಾರಿ ಸಂಸ್ಥೆಯಾದ ಮೆ:ಕಿಯೋನಿಕ್ಸ್, ಬೆಂಗಳೂರು ಇವರ ಮೂಲಕ ಕೈಗೊಳ್ಳುವುದು ಸೂಕ್ತವೆಂದು ಒಪ್ಪಿಗೆ ನೀಡಲಾಯಿತು.

**೧೮೨.೦೪. ಕನ್ನಡ ವಿಶ್ವವಿದ್ಯಾಲಯದ ಪ.ಜಾ/ಪ.ಪಂ ವಿಶೇಷ ಘಟಕದ ವತಿಯಿಂದ ವಿದ್ಯಾರ್ಥಿ ನಿಲಯಗಳಿಗೆ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನದಡಿಯಲ್ಲಿ ಪೀಠೋಪಕರಣ/ಇತರೆ ಸಾಮಗ್ರಿಗಳ ಖರೀದಿಗಾಗಿ ಇ-ಟೆಂಡರ್ ಕರೆಯಲಾಗಿದ್ದು, ಈ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯದ ಪ.ಜಾ/ಪ.ಪಂ ವಿಶೇಷ ಘಟಕದ ವತಿಯಿಂದ ವಿದ್ಯಾರ್ಥಿ ನಿಲಯಗಳಿಗೆ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನದಡಿಯಲ್ಲಿ ಪೀಠೋಪಕರಣ/ಇತರೆ ಸಾಮಗ್ರಿಗಳ ಖರೀದಿಗಾಗಿ ಇ-ಟೆಂಡರ್ ಕರೆಯಲಾದ ಪ್ರಕ್ರಿಯೆಗೆ ಸಮಿತಿಯು ಅನುಮೋದನೆ ನೀಡಿತು.

**೧೮೨.೦೫. ಮಹಿಳಾ ಅಧ್ಯಯನ ಕೇಂದ್ರಕ್ಕೆ ಆರ್ಥಿಕ ನೆರವನ್ನು ಕೋರಿ ನಿರ್ದೇಶಕರು ದಿನಾಂಕ ೦೫.೦೩.೨೦೧೬ರ ನೀಡಿರುವ ಪತ್ರ ಕುರಿತು.**

**ನಿರ್ಣಯ :** ಯುಜಿಸಿ ಅನುದಾನವನ್ನು ನಿರೀಕ್ಷಿಸಿ ಮಹಿಳಾ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಜನೆವರಿ ಮತ್ತು ಫೆಬ್ರವರಿ ೨೦೧೬ರ ವೇತನವನ್ನು ವಿಶ್ವವಿದ್ಯಾಲಯದ ಸಾಮಾನ್ಯ ನಿಧಿಯಿಂದ ಪಾವತಿಸಲು ನಿರ್ಣಯಿಸಲಾಯಿತು. ಯುಜಿಸಿ ಅನುದಾನ ಬಂದ ನಂತರ ಹೊಂದಾಣಿಕೆ ಮಾಡಿಕೊಂಡು ಉಳಿದ ವೇತನವನ್ನು ಪಾವತಿಸಲು ಅನುಮೋದಿಸಲಾಯಿತು. ಒಂದು ವೇಳೆ ಯುಜಿಸಿಯಿಂದ ಅನುದಾನ ಮಂಜೂರಾಗದೇ ಇದ್ದಲ್ಲಿ ಸದರಿ ಕೇಂದ್ರವನ್ನು ಮುಂದಿನ ಆರ್ಥಿಕ ವರ್ಷದಿಂದ ಮಹಿಳಾ ಅಧ್ಯಯನ ವಿಭಾಗಕ್ಕೆ ಸೇರ್ಪಡೆಗೊಳಿಸಬೇಕೆಂದು ನಿರ್ಣಯಿಸಲಾಯಿತು.

**೧೮೨.೦೬. ದಿನಾಂಕ ೧೭-೦೨-೨೦೧೬ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಕೋರಿದೆ.**

**ನಿರ್ಣಯ :** ಡೀನ್ ಸಮಿತಿಗೆ ಕುಲಸಚಿವರನ್ನು ಸದಸ್ಯರನ್ನಾಗಿ ಪರಿಗಣಿಸಬೇಕು. ಇದನ್ನು ನಡೆವಳಿಗಳಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕು. ಉಳಿದಂತೆ ಮಂಡಿಸಲಾದ ನಡೆವಳಿಗೆ ಅನುಮೋದಿಸಿ ಸ್ಥಿರೀಕರಿಸಲಾಯಿತು.

**೧೮೨.೦೭. ಯುಜಿಸಿ ಪ್ರಾಯೋಜಿತ ಶಿಷ್ಯವೇತನ ಪಡೆಯುತ್ತಿರುವ ಆಫ್‌ಲೈನ್ ವಿದ್ಯಾರ್ಥಿಗಳ ಬಾಕಿ ಶಿಷ್ಯವೇತನವನ್ನು (೩೧.೦೩.೨೦೧೬ಕ್ಕೆ ಅಂತ್ಯಗೊಳ್ಳುವಂತೆ) ವಿಶ್ವವಿದ್ಯಾಲಯದ ಅನುದಾನದಿಂದ ಪಾವತಿಸುವ ಕುರಿತು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

**ನಿರ್ಣಯ :** ವಿದ್ಯಾರ್ಥಿಗಳ ಶಿಷ್ಯವೇತನ ಪಾವತಿ ವಿಳಂಬವಾಗಬಾರದೆಂಬ ದೃಷ್ಟಿಯಿಂದ ವಿಶ್ವವಿದ್ಯಾಲಯದ ಅನುದಾನದಿಂದ ಪಾವತಿಸಲು ಅನುಮೋದನೆ ನೀಡಲಾಯಿತು. ಅನುದಾನ ಬಂದ ನಂತರ ಹೊಂದಾಣಿಕೆ ಮಾಡಿಕೊಳ್ಳಲು ಸೂಚಿಸಲಾಯಿತು.

**೧೮೨.೦೮. ದಿನಾಂಕ: ೧೭-೨-೨೦೧೬ ರಂದು ನಡೆದ ಕಾಮಗಾರಿ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಮಂಡಿಸಲಾದ ಕಾಮಗಾರಿ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡಲಾಯಿತು.

**೧೮೨.೦೯. ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಪಾವತಿಸಿದ ಬಿಲ್ಲಿನ ಮೊತ್ತಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ಕೋರಿದೆ.**

**ನಿರ್ಣಯ :** ಅನುಬಂಧ-೧೧ ರಲ್ಲಿ ಸೂಚಿಸಲಾದ ಕ್ರಮಾಂಕ ೧ ರಿಂದ ೨೦ರವರೆಗಿನ ಕಾಮಗಾರಿಗಳ ಬಿಲ್ಲಿನ ಮೊತ್ತ ರೂ.೭೦,೩೪,೫೭೧/- ಗಳ ಪಾವತಿಗೆ ಘಟನೋತ್ತರ ಅನುಮೋದನೆ ನೀಡಲಾಯಿತು.

**೧೮೨.೧೦. ವಿದ್ಯುತ್ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಿಲ್ಲಿನ ಮೊತ್ತಕ್ಕೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.**

**ನಿರ್ಣಯ :** ವಿದ್ಯುತ್ ಕಾಮಗಾರಿಗಳ ಒಟ್ಟು ಬಿಲ್ಲಿನ ಮೊತ್ತ ರೂ.೩,೦೫,೦೦೦/-ಗಳನ್ನು ಪಾವತಿಸಲು ಅನುಮೋದನೆ ನೀಡಲಾಯಿತು.

**೧೮೨.೧೧. ದಿನಾಂಕ ೦೩–೦೩–೨೦೧೬ ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಮಂಡಳಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಕೋರಿದೆ.**

**ನಿರ್ಣಯ :** ಮಂಡಿಸಲಾದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಮಂಡಳಿ ಸಭೆಯ ನಡೆವಳಿಗಳಿಗೆ ಅನುಮೋದನೆ ನೀಡಲಾಯಿತು.

**೧೮೨.೧೨. ದಿನಾಂಕ ೦೫–೦೩–೨೦೧೬ ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ರಜೆ ಕುರಿತ ಯುಜಿಸಿ ನಿಯಮಾವಳಿಗಳಡಿ ನಡೆದ ಪರಿಶೀಲನಾ ಸಮಿತಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಕೋರಿದೆ.**

**ನಿರ್ಣಯ :** ಪರಿಹಾರ ರಜೆಯನ್ನು ಹೊರತುಪಡಿಸಿ ಉಳಿದ ರಜೆಗಳನ್ನು ಜನವರಿ ೨೦೧೬ ರಿಂದ ಪೂರ್ವಾನ್ವಯವಾಗುವಂತೆ ಜಾರಿಗೆತರಲು ಅನುಮೋದನೆ ನೀಡಲಾಯಿತು.

**೧೮೨.೧೩. ದಿನಾಂಕ ೦೫–೦೨–೨೦೧೬ ರಂದು ನಡೆದ ಚಿತ್ರಕಲೆ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಡಿಪ್ಲೊಮ ಕೋರ್ಸ್‌ನ ಪರೀಕ್ಷಾ ಮಂಡಳಿ ಹಾಗೂ ಬಿವಿಎ ಪದವಿ ಪರೀಕ್ಷಾ ಮಂಡಳಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಕೋರಿದೆ.**

**ನಿರ್ಣಯ :** ಅನುಮೋದಿಸಲಾಯಿತು.

**೧೮೨.೧೪. ನುಡಿಹಬ್ಬ–೨೪ ಮತ್ತು ನಮ್ಮಹಬ್ಬದ ಖರ್ಚುಗಳಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಮಾರ್ಚ್ ೧೦, ೨೦೧೬ ರಂದು ನಡೆಯುವ ೨೪ನೇ ನುಡಿಹಬ್ಬ ಮತ್ತು ಮಾರ್ಚ್ ೧೧, ೨೦೧೬ ರಂದು ನಡೆದ ನಮ್ಮಹಬ್ಬ ಕಾರ್ಯಕ್ರಮದ ಖರ್ಚುಗಳಿಗೆ ಅನುಮೋದನೆ ನೀಡಲಾಯಿತು.

**೧೮೨.೧೫. ವಿಶ್ವವಿದ್ಯಾಲಯದಿಂದ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ವಾಹನ ಒದಗಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ವಿಶ್ವವಿದ್ಯಾಲಯದಲ್ಲಿ ಸದ್ಯ ಅಧ್ಯಯನ ಮಾಡುತ್ತಿರುವ ೫ ಜನ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ವಾಹನ ಒದಗಿಸುವ ಕುರಿತ ಪ್ರಸ್ತಾವವನ್ನು ಅನುಮೋದಿಸಲಾಯಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಸಚಿವರು**
**(ಪದನಿಮಿತ್ತ ಕಾರ್ಯದರ್ಶಿ)**

**ಕುಲಪತಿಗಳು**
**(ಅಧ್ಯಕ್ಷರು)**